# ಮೆಹರೌಲಿಯ ತುಕ್ಕುರಹಿತ ಸ್ತಂಭ

ದೆಹಲಿಯ ಮೆಹರೌಲಿಯಲ್ಲಿ 7.20 ಮೀಟರ್ ಉದ್ದದ ಕೀರ್ತಿ ಸ್ತಂಭವಿದೆ. ಇದನ್ನು ಇಮ್ಮಡಿ ಚಂದ್ರಗುಪ್ತ ಮೌರ್ಯ ವಿಷ್ಣುದೇವರಿಗಾಗಿ ಸ್ಥಾಪಿಸಿದನು. ಈ ಕಂಬವನ್ನು ಶೇ. 98ರಷ್ಟು ಮೆದು ಕಬ್ಬಿಣದಿಂದ ಕಟ್ಟಲಾಗಿದ್ದು, ಇದುವರೆಗೆ ಸ್ವಲ್ಪವೂ ತುಕ್ಕು ಹಿಡಿಯದಿರುವುದು ಆಗಿನ ಕಾಲದ ಲೋಹಶಾಸ್ತ್ರದ ಸಾಧನೆ ತಿಳಿಸುತ್ತದೆ. ಆರು ಟನ್‌ಗಿಂತ ಹೆಚ್ಚು ಭಾರವಿರಬಹುದೆಂದು ಅಂದಾಜಿಸಲಾಗಿದೆ. ಇದು ಉತ್ತರ ಭಾರತದಲ್ಲಿ ಹಲವೆಡೆ ಕಾಣಸಿಗುವ ಆಶೋಕಸ್ತಂಭಗಳ ಹಾಗೇ ಇದೆ.

**-ಎಸ್. ಜಯಶ್ರೀ ಶೆಣೈ, ಬಂಟ್ವಾಳ**





# ಅಕ್ಕಿ ಮಾಡುವ ಮರದ ಯಂತ್ರ

ಹಿಂದಿನ ಕಾಲದಲ್ಲಿ ಭತ್ತವನ್ನು ಅಕ್ಕಿಯಾಗಿ ಸಿದ್ಧಗೊಳಿಸಲು ಈಗಿನಂತೆ ಅಕ್ಕಿ ಗಿರಣಿ ಇರಲಿಲ್ಲ. ಅವರು ಕಾಳನ್ನು ಹಿಟ್ಟು ಮಾಡುವ ಬೀಸೋ ಕಲ್ಲಿನ ತರಹದ ದೊಡ್ಡ ಗಾತ್ರದ ಮರದ ಸಾಧನವನ್ನು ಬಳಕೆ ಮಾಡುತ್ತಿದ್ದರು. ಚಿತ್ರದಲ್ಲಿರುವ ಮರದ ಸಾಧನವೂ ಭತ್ತವನ್ನು ಅಕ್ಕಿಯಾಗಿ ಮಾರ್ಪಡಿಸುವ ಒಂದು ಸರಳ ಸಾಧನ ಎನ್ನಬಹುದು. ಇದರಲ್ಲಿರುವ ಗೆರೆಯಂತಿರುವ ಉಬ್ಬನ್ನು ಸಾಧನವನ್ನು ಜೋರಾಗಿ ತಿರುಗಿಸುವಾಗ ಭತ್ತವನ್ನು ಒಡೆದು ಅಕ್ಕಿಯನ್ನು ಹೊರಗೆ ಹಾಕುವಂತೆ ತಯಾರಿಸಲಾಗಿದೆ. ಶಿರಸಿಯ ಹಳ್ಳಿ ಮನೆಯೊದರಲ್ಲಿ ಕಂಡುಬಂದ ಈ ಸಾಧನ ಈಗಲೂ ಸುಸ್ಥಿತಿಯಲ್ಲಿದೆ.

**-ಜೆ.ಎಂ.ಬೊಮ್ನಳ್ಳಿ, ಶಿರಸಿ**

# ಸಾಕು ಪ್ರಾಣಿಗಳ ಸಮಾಧಿ

ತಮಿಳುನಾಡಿನ ತಿರುವಣ್ಣಾಮಲೈನಲ್ಲಿರುವ ರಮಣ ಮಹರ್ಷಿಯವರ ಆಶ್ರಮದಲ್ಲಿ ಸಾಕು ಪ್ರಾಣಿಗಳ ಸಮಾಧಿಗಳನ್ನು ಕಾಣಬಹುದು. ಹಸು, ನಾಯಿ, ಜಿಂಕೆ, ಕಾಗೆ.. ಹೀಗೆ. ಅಧ್ಯಾತ್ಮ ಗುರುಗಳಾಗಿದ್ದ ಮಹರ್ಷಿಗಳಿಗೆ ಹತ್ತಿರವಾಗಿದ್ದ ಸಾಕು ಪ್ರಾಣಿಗಳು ಸತ್ತಾಗ ಅದಕ್ಕೆ ಗೌರವ ಪೂರ್ಣವಾಗಿ ಆಶ್ರಮದಲ್ಲಿಯೇ ಸಮಾಧಿ ಮಾಡಲಾಗಿದೆ. ಪ್ರಾಣಿಗಳು ಕೂಡ ಮನಸ್ಸಿಗೆ ಎಷ್ಟು ಹತ್ತಿರವಾಗಬಲ್ಲವು ಎಂಬುದು ಇದನ್ನು ನೋಡಿದರೆ ತಿಳಿಯುತ್ತದೆ.

**-ಡಾ.ಕೆ.ವಿ. ಸಂತೋಷ್, ಚಿತ್ರದುರ್ಗ**

